ಸಮಾಜ ಸಂಗೀತ

ಕವಿ:

ಬಡೆಕ್ಕಿಲ ವೆಂಕಟರಮಣ ಭಟ್ಟ

ಹರಾಮಾರ್ಶಿಗಾ

ಪ್ರಕಾಶಕರು:
ಬಡೆಕ್ಕಿಲ ವೆಂಕಟರಮಣ ಭಟ್ಟ
ಗೀತಾ ಮಂದಿರ, ಬಡೆಕ್ಕಿಲ,
ಕೆದಿಲಗ್ರಾಮ, ಬಂಟ್ವಾಳ ತಾಲೂಕು.
ಪೋಸ್ಟ್ ಕೆದಿಲ, ದ.ಕನ್ನಡ.

ಬೆಲೆ: ೪೦ ಪೈಸೆ

ಸಮಾಜ ಸಂಗೀತ

ಕವಿ:

ಬಡೆಕ್ಕಿಲ ವೆಂಕಟರಮಣ ಭಟ್ಟ

ಪುರಾಣಿಕೆಗಾಗಿ

ಪ್ರಕಾಶಕರು:

ಬಡೆಕ್ಕಿಲ ವೆಂಕಟರಮಣ ಭಟ್ಟ
ಗೀತಾ ಮಂದಿರ, ಬಡೆಕ್ಕಿಲ,
ಕೆದಿಲಗ್ರಾಮ, ಬಂಟ್ವಾಳ ತಾಲೂಕು.
ಪೋಸ್ಟ್ ಕೆದಿಲ, ದ.ಕನ್ನಡ.

ಬೆಲೆ: ೪೦ ಪೈಸೆ

ಮೊದಲ ಮಾತು

ಈಗ್ಗೆ ಸುಮಾರು ಒಂದೂ ಕಾಲು ಸಾವಿರ ವರ್ಷಗಳ ಹಿಂದೆ ನಿರೀಶ್ವರ ವಾದಿಗಳಾದ ಬೌದ್ಧರ ಕಾಲ್ತುಳಿತದಿಂದ ನಜ್ಜುಗುಜ್ಜಾದ ಸನಾತನ ಧರ್ಮ ವನ್ನು ಉದ್ಧರಿಸಲಿಕ್ಕಾಗಿ ಕೇರಳ ಪ್ರಾಂತದ ಕಾಲಟಿ ಕ್ಷೇತ್ರದಲ್ಲಿ ಜನಿಸಿ ತಮ್ಮ ತಪಃಪ್ರಭಾವದಿಂದ ಭರತ ಖಂಡದ ರಾಜಾಧಿರಾಜರನ್ನೆಲ್ಲ ಅಂಕಿತದಲ್ಲಿಟ್ಟು ಕೊಂಡು ಅದ್ವೈತ ಸಿದ್ಧಾಂತವನ್ನು ನೆಲೆಗೊಳಿಸಿ ಧರ್ಮೋದ್ಧಾರಕ್ಕಾಗಿ ಜೀವನ ವನ್ನೇ ಮುಡುಪಾಗಿಟ್ಟ ಭಗವಾನ್ ಶ್ರೀ ಶಂಕರಾಚಾರ್ಯರ ಉದ್ದೇಶ ವೇನಿತ್ತೊ ಅದಕ್ಕೆ ಭಂಗವುಂಟಾಬಹುದಾದ ಪ್ರವೃತ್ತಿಯು ಭಾರತೀಯರಾದ ಆಚಾರ್ಯ ಪೀಠಸ್ಥ ಮಠಾಧಿಪತಿಗಳೆನಿಸುವ ಕೆಲವರಲ್ಲಿಯೂ, ಸಮಾಜದ ಅಗ್ರ ಗಣ್ಯರೆಂಬ ಕೆಲವರಲ್ಲಿಯೂ, ತಲೆದೋರುತ್ತಿರುವದನ್ನು ನೋಡಿ ಬೆರಗಾದನಾನು "ಸಮಾಜ ಸಂಗೀತ"ವೆಂದು ಹೆಸರಿಟ್ಟು ಈ ಚಿಕ್ಕ ಹೊತ್ತಗೆಯೊಂದನ್ನು ಬರೆದು ಪ್ರಕಟಿಸಿದ್ದಾಗಿದೆ. ಇದು ಯಾರನ್ನಾದರೂ ಗುರಿಯಿಟ್ಟುಕೊಂಡಾಗಲಿ ಇಲ್ಲವೆ ದ್ವೇಷ ಮೂಲಕದಿಂದಾಗಲಿ ಪ್ರಕಟಿಸಿದ್ದಲ್ಲ. ವಸ್ತುಸ್ಥಿತಿಯನ್ನು ನೆನೆದು ಮರುಕಗೊಂಡ ಪ್ರಾಯ ವರ್ಷ ೮೫ರಲ್ಲಿ ಕಾಲಿರಿಸಲಿಕ್ಕಿರುವ ವಯೋವೃದ್ಧ ನಾದ ನನ್ನ ಅಂತರ್ವಾಣಿಯ (ಅಂತರಂಗದ) ಹೊನಲೇ ಈ ಕೃತಿಯು. ಈ ಹೊತ್ತಗೆಯನ್ನು "ಗುರುಪೀಠಗಳ ಅವನತಿ"ಯೆಂಬ ಪ್ರಬಂಧದ ಎರಡನೇ ಮುದ್ರಣದಲ್ಲಿ ಉದ್ಯುಕ್ತರಾದ ದೈವಜ್ಞರತ್ನ ಶ್ರೀ ಯರ್ಮುಂಜ ಶಂಕರ ಜೋಯಿಸರ ಪುತ್ರ ಭೀಮ ಜೋಯಿಸರಿಗೆ ಅದರೊಡನೆ ಪುಸ್ತಕವಾಗಿ ಅಚ್ಚು ಹಾಕಿಸಿ ಕೊಳ್ಳುವುದಕ್ಕೆ ಅನುಮತಿ ನೀಡಿರುತ್ತೇನೆ.

ವಿರೋಧಿಕೃತ್ಸಂ।ದ ವೈಶಾಖ ಶು. ೫
ಗುರುವಾರ, ಶಂಕರ ಜಯಂತೀ.

ಇತಿ, ಕಾವ್ಯಕರ್ತ
ವೆಂಕಟರಮಣ ಭಟ್ಟ.

ಶ್ರೀಃ

ಸಮಾಜ ಸಂಗೀತ

॥ ಸಾಂಗತ್ಯ ॥ ರೂಪಕ—ತಾಳ ॥

ಎರಡಿಲ್ಲದೊಂದೆಂಬ ಸಾರಸಿದ್ಧಾಂತವ ।
ಧರೆಗೆಲ್ಲರರಿವಂತೆ ಪೇಳ್ದ ।
ಪರಮ ಸುಜ್ಞಾನಿ ಶ್ರೀ ಶಂಕರಾಚಾರ್ಯರ ।
ಪರಮಾನುಗ್ರಹವೆನ್ನೊಳಿರಲಿ ॥ ॥ ೧ ॥

ಆ ಮಹಾಮಹಿಮರಾಶ್ರಿತ ವತ್ಸಲರು ಪೂರ್ಣ ।
ಕಾಮರು ಕರುಣಾಸಾಗರರು ॥
ಈ ಮಹಿಯೊಳಗುಳ್ಳ ಸಕಲ ಮಾನವರ ಸು ।
ಕ್ಷೇಮ ಚಿಂತನೆಯುನಾರಯ್ದು ॥ ॥ ೨ ॥

ಬಲ್ಲಿದರಾಗಲಿ ಬಡವರಾಗಲಿ ಧಾತ್ರೀ ।
ವಲ್ಲಭರೆನಿಸಿಕೊಂಡಿರಲಿ ॥
ಎಲ್ಲರೊಂದಾಗಿ ಬಾಳುವೊಡೆ ಸದ್ಧರ್ಮವೊಂ ।
ದಲ್ಲದಿಲ್ಲೆಂಬ ನಿಶ್ಚಯದಿ ॥ ॥ ೩ ॥

ಭರತ ಖಂಡದೆ ಪೂರ್ವ ದಕ್ಷಿಣ ಪಶ್ಚಿಮೋ ।
ತ್ತರವೆಂಬ ನಾಲ್ಕುದಿಕ್ಕಿನೊಳು ॥
ವಿರಚಿಸಿದರು ನಾಲ್ಕು ಮಠಗಳನಾಚಾರ್ಯ ।
ಗುರುಪೀಠಂಗಳಿವೆಂಬ ಪೆಸರಿಂ ॥ ॥ ೪ ॥

ಶಾಪಾನುಗ್ರಹಶಕ್ತರೆಂಬ ಲೋಕೋಕ್ತಿಯು ।
ತಾಪಸೋಪಮರ ನಾಲ್ವರನು ॥
ಆ ಪೀಠಗಳೊಳು ಕುಳ್ಳಿರಿಸಿದರಲ್ಲಲ್ಲಿ ।
ಭೂಪಾಲಾರಾಶ್ರಯ ಪಡೆದು ॥ ॥ ೫ ॥

ಎಂತಿರಬೇಕಿಲ್ಲಿ ಮಠಪತಿಗಳು ಮೇಣಂ ।
ನ್ನೆಂತಿರಬೇಕೆಂಬ ಬಗೆಗೆ ।
ಇಂತೀರೆಂದೆಂಬ ಶಾಸನವೆ ಮಠಾಮ್ನಾಯ ।
ವೆಂತಿಪ್ಪುದಂಗೆಯ್ಯುವುದು ॥ ॥ ೬ ॥

ಆಚಾರವೆನಲಾದ್ಯ ಧರ್ಮವಿನ್ನದರಿಂ ಸ ।
ದಾಚಾರ ಶೀಲರಲ್ಲದೊಡೆ ॥
ಆಚಾರ್ಯ ಪೀಠದ ಘನತೆಗೆ ಕೊನೆಯೆಂದು ।
ಸೂಚಿಸಿ ನುಡಿದರಿಂಗಿತವ ॥ ॥ ೭ ॥

ಮನಕೆ ಕಾಣಿಸಿದಂತೆ ಮಾಡಲಾಗದು ಮಾನ್ಯ ।
ಜನರ ಠಕ್ಕಿಸಲಾಗದರಿದು ॥
ಧನವನಿತ್ತಪರೆಂದು ಸತ್ಯಕ್ಕೆ ಹೊರತಾದು ।
ದನು ಮಾಡಲಾಗದೆಂದೆಂದು ॥ ॥ ೮ ॥

ಸಂಚಾರ ಕ್ರಮವ ನಿಶ್ಚಯದಂತೆ ದಿನನಿತ್ಯ ।
ಸಂಚರಿಸುವುದು ರಾಜ್ಯದೊಳು ॥
ಪಂಚಭೂತಗಳ ಸಂಕಲನದಿಂದಾದ ಪ್ರ ।
ಪಂಚದಿರ್ಕೆಯ ಬೋಧಿಸುವುದು. ॥ ॥ ೯ ॥

ಹುಸಿಗ ಮದಾಂಧ ಬಾಯ್ಬಡಿಕ ಕಳ್ಗುಡಿಕ ದು।
ರ್ವ್ಯಸನಿ ದುರಾಚಾರ ಶೀಲ ॥
ಪಿಸುಣ ಮಚ್ಚರಿಗರಿಂತಿವರ ಹತ್ತಿರಕೆ ಸೇ ।
ರಿಸಲಾಗದಾಚಾರ್ಯವರರು ॥ ॥ ೧೦ ॥

ಸಾಮದಾನಗಳಿಂದ ಸರಿದಾರಿಗೆಳಸದ ।
ತಾಮಸರಹ ಶುದ್ಧ ಶಠರ ॥
ಧೀಮಂತರೊರೆವಂತೆ ಭೇದದಂಡಗಳಿಂದ ।
ಲಾ ಮೂರ್ಖಜನರ ತಿರ್ದುವುದು ॥ ॥ ೧೧ ॥

ಗುಣಕರ್ಮಗಳ ಭೇದದಿಂದ ಮಾನವರೊಳು ।
ಗಣನೆಗಾದುದು ವರ್ಣನಾಲ್ಕು ॥
ಎಣಿಸಿ ನೋಡಿದಡೊಂದು ಗುಣಧರ್ಮಕಿನ್ನೊಂದು ।
ಗೊಣಸೆಂಬುದರಿಯೆ ಪೇಳುವುದು ॥ ॥ ೧೨ ॥

ಆಡಿ ತೋರಿಸಿ ವರ್ಣಗಳೊಳು ಕೀಳ್ಮೇಲೆಂಬ ।
ಮೂಢಯೋಚನೆಗಳನಳಿಸಿ ॥
ಕೂಡಿ ತಂತಮ್ಮ ವೃತ್ತಿಗೆ ಸಂದ ಕೆಲಸವ ।
ಮೂಡುವಂತುಪದೇಶಿಸುವುದು ॥ ॥ ೧೩ ॥

ಏನಾದರೊಂದೊಂದು ಪೆಸರಿಡಬಹುದಾದ ।
ರೀ ನಾಲ್ಕು ವರ್ಣದಃಜ್ಞಗವು ॥
ಮಾನವ ಕುಲಕಿದು ಬೇಕೇಬೇಕೆಂಬ ವಿ।
ಧಾನವನರಿಯೆ ಪೇಳುವುದು ॥ ॥ ೧೪ ॥

ನೆಲ ನೀರು ಗಾಳಿ ಕಿಚ್ಚುಗಳೊಳು ಬಾಳ್ವೆಯು ।
ನೆಲೆಗೆ ಮುಖ್ಯವದಾವುದೆಂಬ ।
ನಿಲುವುಂಟೆ ವರ್ಣ ಧರ್ಮಗಳಂತೆ ಜನದ ಬೆ ।
ನ್ನೆಲುವೆಂಬುದರಿಯೆ ಪೇಳುವುದು ॥ ॥ ೧೫ ॥

ಕುಟಿಲರ ಕುಹಕರ ಲೋಕಕಂಟಕರ ದು ।
ಶ್ಚಟರ ದುರ್ಭಗರ ದೂಷಕರ ।
ವಿಟರ ಶುಂಠರನಾರೆಂದಲ್ಲಲ್ಲಿ ನೋಡಿ ಪ ।
ರ್ಯಟಣ ಕಾಲದೊಳರಿತಿಹುದು ॥ ॥ ೧೬ ॥

ಪಂಡಿತವರರ ಸತ್ಕವಿಗಳ ಸುಜ್ಞಾನ ।
ಭಂಡಾರಧರರ ಧಾರ್ಮಿಕರ ॥
ಕಂಡಲ್ಲಿ ಕರೆದು ಸತ್ಕರಿಸಿ ಮೃದೂಕ್ತಿಯಿಂ ।
ಕೊಂಡಾಡಿಕಳಿಪುವುದವರ ॥ ॥ ೧೭ ॥

ಕನಕ ಕಾಂಚನ ಕಪ್ಪ ಕಾಣಿಕೆ ಹರಕೆ ಕಾ ।
ಮಿನಿಯರ ಸೋಂಕಿನೆಲ್ಲವನು ॥
ಕನಸಿನೊಳಾದರು ಮಠಪತಿಗಳು ನಚ್ಚಿ ।
ನೆನೆದರಾದೊಡೆ ಹಾನಿಯಹುದು ॥ ॥ ೧೮ ॥

ವೇದ ವೇದಾಂಗ ಶಾಸ್ತ್ರಜ್ಞಾನ ವಿನಯ ಸ ।
ಮಾಧಿ ಸಜ್ಜನಸಂಘ ಸಮತೆ ।
ವೇದಾಂತ ನಿಷ್ಠೆಗಳಿವು ಬೇಕೆಂಬರಿವಿನ ।
ಸಾಧನವಳಿಯದಂತಿಹುದು ॥ ॥ ೧೯ ॥

ಕೂಟಸ್ಥರವರಂದಿನಾಜ್ಞೆಯ ನಿಂದಿಗಾ ।
ಪೀಠಸ್ಥರೆನಿಸುವ ಕೆಲರ ।
ನಾಟಕರಂಗದ ನಟನೆ ನರ್ತನದ ಸ ।
ಘಾಟಿಕೆಯನು ಪೇಳ್ವೆ ನಿನ್ನು ॥ ॥ ೨೦ ॥

ಎಮ್ಮ ವಾಕ್ಯವೆ ವೇದ ವಾಕ್ಯವಾವೆಂಬುದೆ ।
ನಿರ್ಮಲ ಸ್ಮೃತಿ ಧರ್ಮಸಾರ ॥
ಎಮ್ಮಿಂದ ಮಿಗಿಲಾರು ಜಗದ ಸದ್ಗುರುವಾವು ॥
ಸುಮ್ಮನೇತಕೆ ಬಳಲುವಿರಿ ॥ ॥ ೨೧ ॥

ಇರುವಾಸೆಯೆಮಗೊಂದು ಕರೆಸಿಕೊಂಬುವಿರೆಂದು ।
ಬರುವೆವಾಗಲೆ ನಿಮ್ಮ ಮನೆಗೆ ॥
ಶರಣೆಂದು ರೌಪ್ಯರಾಸಿಯನೆಲ್ಲ ಸುರಿದರೆ ।
ಪರಿಹಾರವಹುದು ಕಷ್ಟಗಳು ॥ ॥ ೨೨ ॥

ಸೆಳೆದುಯ್ದು ಕದ್ದು ವಂಚಿಸಿ ತಂದರೇನು ಮುಂ ।
ದಿಳುಹಿ ಕಾಣಿಕೆಗೊಟ್ಟೊಡೆಮಗೆ ।
ಕಳೆದೇಳು ಜನ್ಮದ ಪಾಪಂಗಳಿದರೊಂದಿ ।
ಗಳಿದು ನಿರ್ಮಳರಪ್ಪರವರು ॥ ॥ ೨೩ ॥

ನರಜನ್ಮದಲಿ ಬಂದ ಕುರುಹಿಗಾದರು ಬೇರೆ ।
ತೆರುವೊಡಿಲ್ಲದೊಡೆ ಭಕ್ತಿಯೊಳು ।
ಮುರುವನಾದರು ಮುಟ್ಟಿ ಮುರಿದೀಯೆ ದಾರಿದ್ರ್ಯ ।
ವರ ತಪ್ಪುವಖಿಳ ಭಾಗ್ಯಗಳು ॥ ॥ ೨೪ ॥

ಗರದ ಸೋಂಕಿಗೆ ಯಂತ್ರ ಮೂರ್ಛಾರೋಗಕೆ ಮಂತ್ರ ।
ಮರುಳರ್ಗೆ ಹಿರಿದಾದ ತಂತ್ರ ।
ಇರುವವೆಮ್ಮೊಳು ವೆಚ್ಚವಧಿಕವಂತದರಿಂದಾ ।
ವೊರೆಯಲೊಲ್ಲದೆ ಸುಮ್ಮನಿಹೆವು ॥ ॥ ೨೫ ॥

ಮಕ್ಕಳ ಬಯಕೆಗೆ ಮದ್ದು ತಾಯಿತರಕ್ಕೆ ।
ಯಿಕ್ಕು ಬೇಕೆಂದಾದರದಕೆ ।
ಚೊಕ್ಕ ಚಿನ್ನವೆ ಮುಖ್ಯ ಹರಕೆ ಯಂತಿತ್ತರೆ ।
ತಕ್ಕ ಕಾಲದೊಳಾಗದಿರದು ॥ ॥ ೨೬ ॥

ತಂದೆ ತಾಯ್ಗಳ ಬಂಧು ಬಳಗಾದಿಗಳ ವೈರ ।
ವೆಂದೊಡೆ ಲೆಕ್ಕಿಸಲೇಕೆ ॥
ಬಂದೆಮಗೆರಗಿ ಪೇಳ್ದಂತೆ ಕಾಣಿಕೆಯ ಕೊ ।
ಟ್ಟಂದಿಗೆಲ್ಲವು ಸೊಗಸುವುದು ॥ ॥ ೨೭ ॥

ಬಂದಡ್ಡಬಿದ್ದು ಕೈಮುಗಿದು ನಿಂದಿರಬೇಕಾ ।
ವೆಂದುದೆಲ್ಲವ ಮಾಡಬೇಕು ।
ಸಂದೇಹವೇಕೆ ನಾವೆಂದುದೇ ಧರ್ಮವಿಂ ।
ತೆಂದೆಲ್ಲರರಿತಿರಬೇಕು ॥ ॥ ೨೮ ॥

ಮರು ಮಾತಾಡಿದರೊಬ್ಬನಂದಿನುತ್ತರನ ವಾಗ್ ॥
ಝರಿಯ ವಿಾರಿಸುವೊಂದು ಬೆಡಗು ।
ಧರೆಗೆ ಶಾಸಕರಾವು ನರಗುರಿ ನೀನಾರು ।
ಸರಿಯುತ್ತಲೆಂಬೊಂದು ಗುಡುಗು ॥ ॥ ೨೯ ॥

ಮಾನ ಮರ್ಯಾದೆಗಳೆಂಬಿವೆಲ್ಲವು ನಮ್ಮೊ ।
ಧೀನವಿಪ್ಪುವು ಮುನ್ನಿನಂತೆ ।
ಆನೊಬ್ಬ ಗುರಿಕಾರ ಭಟ್ಟ ಜೋಯಿಸರೆಂದೆಂ ।
ಡಾನುವರಾರು ನಿಮ್ಮರವ ॥ ॥ ೩೦ ॥

ಶಂಕರ ನಿನ್ನೊಬ್ಬನಿಹನೆ ಲೋಕದೊಳಾದ್ಯ ।
ಶಂಕರರಾವೇ ಯೆಂದರಿದು ॥
ಶಂಕಿಸದಿತ್ತರ್ಗೆ ಸಕಲ ಸೌಭಾಗ್ಯವಾ ।
ತಂಕವಿಲ್ಲದೆ ಕೈಸೇರುವುದು ॥ ॥ ೩೧ ॥

ಕೊಡುವುದೆ ಧರ್ಮ ಬಚ್ಚಿಡುವುದಾದೊಡಧರ್ಮ ।
ಕೊಡಬೇಹುದದರಿಂದೆಲ್ಲವನು ॥
ಕೊಡದಿದ್ದರಡಿಯುಪಾಯ ಪಂಚಾಂಗವಿರದ ಕ ।
ಟ್ಟಡದಂತೆ ಮುಂದೆ ಕೇಡಹುದು ॥ ॥ ೩೨ ॥

ಹೋದ ಹೋದಲ್ಲಿ ನಿಂದೆಡೆಯಲ್ಲಿ ಬಂದಲ್ಲಿ ।
ಭೇದ ಮಂತ್ರೋಪದೇಶವನು ॥
ಸಾದರದಿಂ ಕರೆಕರೆದಿತ್ತು ನಲ್ಮೆಯು ।
ಸೋದರ್ಯತನವ ತೊಳುವರು ॥ ॥ ೩೩ ॥

ಹೊಕ್ಕು ಹೊಕ್ಕಲ್ಲಿ ಮುಂಮನೆವಾಳ್ತೆಗಾಗಿ ಕೈ ।
ಯಿಕ್ಕಿ ಪೆಣ್ ಮಕ್ಕಳಂದದಲಿ ॥
ತಕ್ಕ ಸನ್ನಾಹಗಳಿಸಿ ತಿನಿತಿರಲೆಂಬೊಂ ।
ದುಕ್ಕಿಹದಿಂದ ಪೇಳುವರು ॥ ॥ ೩೪ ॥

ಹಿರಿಯರರಿಯದಂತೆ ಶ್ರೀಮಂತತರುಣರ ।
ಬರಿಸಿ ಹತ್ತಿರಕೆ ಕುಳ್ಳಿರಿಸಿ ॥
ಮೆರೆದಟ್ಟಹಾಸದೊಳೊರೆದು ವಂಚಿಸಿ ತಮ್ಮ ।
ಗರಿಮೆಯನಿಂತು ಪೇಳುವರು ॥ ॥ ೩೫ ॥

ಅರಿಗೈಯ್ಯೆಂದೈತಪ್ಪರಿಲ್ಲ ಸಾಷ್ಟಾಂಗದಿಂ ।
ದೆರಗದರಿಲ್ಲ ಭಕ್ತಿಯೊಳು ॥
ಒರೆದ ಕಾರ್ಯಗಳಾವುದಿರಲಿ ನಿಮ್ಮನ್ನರು ।
ನೆರಪದರಿಲ್ಲ ಬಲ್ಲವರು ॥ ॥ ೩೬ ॥

ಇಂದೆಮ್ಮಾಣತಿಯು ಮನ್ನಿಸದ ಮಾನವರೊಳು ।
ಮಂದ ಬುದ್ಧಿಗಳ ಮರ್ಕಟರು ॥
ಮುಂದೆ ಮುಂದೈತಂದು ತಾವಾಗಿ ಕ್ಷಮಿಸ ಬೇ ।
ಕೆಂದೆಂಬುದಕೆ ದೂರವಿರದು ॥ ॥ ೩೭ ॥

ಅಲ್ಲಲ್ಲಿಗೆಂದಂತೆ ಬಾರದಿದ್ದರೆ ಬೈದು ।
ಸಲ್ಲದಲ್ಲದ ಮಾತನಾಡಿ ॥
ಘಲ್ಲಿಸುವರು ತಮ್ಮ ತಾಳಕ್ಕೆ ಕುಣಿವರ ।
ನೆಲ್ಲರ ತಲೆದೂಗಿಸುವರು ॥ ॥ ೩೮ ॥

ಇಂದಿಗೆ ಸಂಗ್ರಹವಿನಿತಾಯ್ತು ನಾಳೆಗಿ ।
ನ್ನೊಂದು ಲಕ್ಷವು ಕೈಸೇರುವುದು ॥
ಮುಂದೆ ಬೇಕಾದಷ್ಟು ವಾಗ್ದತ್ತ ಧನವಿಪ್ಪ ।
ದೆಂದೆರ್ದೆಯುಬ್ಬಿ ಪೇಳುವರು ॥ ॥ ೩೯ ॥

ನೂರಾರು ತೆರದಾಸೆ ಬಯಕೆ ಬಂಧನಗಳಿಂ ।
ದೂರಿಗನ್ಯಾಯವನೆಸಗಿ ॥
ಹೇರಾಳ ಧನವ ಸಂಗ್ರಹಿಸುವರುಪಭೋಗ ।
ಸಾರ ಸಾಧನಕೆ ಮೆಯ್ಯೊಡ್ಡಿ ॥ ॥ ೪೦ ॥

ಕಾರೊಳು ಸಂಚಾರ ಬಿಗಿದ ಕೈಗಡಿಯಾರ ।
ಸೂರಿಗಳೆನಲು ತಾತ್ಸಾರ ॥
ಆರೇನನೆಂದರುದುರಭಿಮಾನವ ಬಿಟ್ಟು ।
ದೂರವಾಗದ ಕಾರ್ಯಭಾರ ॥ ॥ ೪೧ ॥

ಉಪಚಾರಗಳ ಮಾತಿದಲ್ಲ ಸಮಾಜದೊಂ ।
ದುಪಯೋಗ ಕಾರ್ಯಕಲ್ಲದೊಡೆ ॥
ವಿಪುಲ ಸಂಗ್ರಹವೇಕೆ ಸನ್ಯಾಸಿಗಳು ನಾವು ।
ತಪಸಿಗಳೈಸೆ ನಿಸ್ಪೃಹರು ॥ ॥ ೪೨ ॥

ಪರಿಕಾರ ಧರಕಾರ ಕಟ್ಟಿಗಾರರು ।
ಬ್ಬರ ಭಟ್ಟಂಗಿಗಳ ಬಲ್ಲುಲುಹು ॥
ಪರಿವಾರ, ಪೀಠ ಮಂಟಪಗಳೊಡ್ಡಾರವ ।
ಸೊರೆದಪದನಾರು ಬಣ್ಣಿಪರು ॥ ॥ ೪೩ ॥

ಇಂತಿಪ್ಪ ಮಠದಾಧಿಪತಿಗಳು ತೋರ್ಕೆಗಿ ।
ನ್ನೆಂತಿದ್ದರಾರಾದರೇನು ॥
ಅಂತರಂಗದ ಗುಟ್ಟನರಿವಾರಲ್ಲಿಯು ಬುದ್ದಿ ।
ವಂತರಿದ್ದಾಲೋಚಿಸುವುದು ॥ ॥ ೪೪ ॥

ಹಿಂದಿನಿಂದಲೆ ಕೇಳ್ದ ಮಹಿಮೆ ದಿಮ್ಮಿದರೆಲ್ಲ ।
ಬಂದೋಲೈಸುವುದೊಂದು ಹಿರಿಮೆ ।
ಇಂದಿನಾಡಂಬರ ಬಲುಮೆಗಳವಕಿನ್ನು ।
ಮುಂದೇಯೇನೆಂದು ಯೋಚಿಪ್ಪುದು ॥ ॥ ೪೫ ॥

ಕಾವಿಯ ವಸ್ತ್ರ ಬೋಳ್ದಲೆದಂಟು ದರ್ಪಪ್ರ ।
ಭಾವಡಾಂಭಿಕತೆ ಹೆಗ್ಗಳಿಕೆ ॥
ನಾವೇನಾವೆಂಬ ಹಂಭಾವದ ಬಗೆಗಳ್ಗೆ ।
ನಾವು ಯೋಚಿಸುವುದೊಂದಾಗಿ ॥ ॥ ೪೬ ॥

ನೋಡಿ ಕುಳ್ಳಿರಿಸಿ ಮಾತಾಡಿ ನಲ್ಮೆಯೊಳ್ ಕೈ ॥
ನೀಡಿ ತಕ್ಕೈಸಿ ಕೊಂಡಾಡಿ ।
ಬೇಡಿ ಕಂಡುದನೆಲ್ಲ ಕಾಡಿ ಸೂಳೆಯರಾಟ ।
ಮಾಡುವ ಬಗೆಗೆ ಯೋಚಿಪ್ಪುದು ॥ ॥ ೪೭ ॥

ಹುಟ್ಟಿದಾರಭ್ಯ ಸ್ವಾಮಿಯರ ಕಂಡರಿಯದ ।
ಕೊಟ್ಟಷ್ಟು ಮುಗಿಯದ ಹಣದ ।
ಪೆಟ್ಟಿಗೆಗಾರರಂತಿರಲಿ ಸಜ್ಜನರೆಲ್ಲ
ದೊಟ್ಟಾಗಿ ನಿಂದಾಲೋಚಿಪುದು ॥ ॥ ೪೮ ॥

ನಾಗಣ್ಣನೊಂದಿಗೆ ಮುಸುಡು ಮೂಗಿರದ ಭೂ ।
ನಾಗಂಗಳುರ್ಬಿ ಮೇಲೆದ್ದು ॥
ತಾಗಿ ಕಕ್ಕುವೊಲಂತಿರಾದ ಹೆಗ್ಗಣಗಳಿ ।
ಗಾಗಿ ಮುಂದಾಲೋಚಿಸುಪುದು ॥ ॥ ೪೯ ॥

ಊರೆಲ್ಲರನ್ಯಾಯಗಾರನೆಂದರು ದಂಡ ।
ಧಾರಿ ಸನ್ಯಾಸಿಗಳೆಮಗೆ ॥
ಪಾರುಪತ್ಯವನಿತ್ತರೆಂಬ ಹೆಮ್ಮೆಯ ಪಿತ್ತ ।
ವೇರಿದ ಪಿಸುಣರಂತಿರಲಿ ॥ ॥ ೫೦ ॥

ಬಿಟ್ಟವನಿಳಿದೇರಿ ಜಾರಿ ಬೇಡಾದರು ।
ಬಿಟ್ಟುಹೋಗದ ಹುಟ್ಟುಗುಣವ ॥
ಕಟ್ಟುಕಟ್ಟಳೆಗಳನೊಳಗೊಂಡ ಸನ್ಯಾಸಿ ।
ಪಟ್ಟವೇನಳಿಸಲಾರ್ತಪುದೆ ॥ ॥ ೫೧ ॥

ಬುದ್ಧಿಗೆ ಪೂರ್ವಾಶ್ರಮದೊಳಾದ ಸಂಸ್ಕಾರ ।
ವಿದ್ದಂತೆ ನಡೆವ ದುರ್ಭರವ ॥
ತಿದ್ದುವರಾರುತ್ತರಾಶ್ರಮದೊಳು ನಿಂದ
ಗದ್ದುಗೆಯೇನಳಿಸುವುದೆ ॥ ॥ ೫೨ ॥

ನಡೆ ಹೋಗು ಬಾ ಕುಳ್ಳಿರೇಳು ನಾವೆಂಬಂತೆ ।
ನಡೆ ನಮ್ಮ ನಂಬಂತಲ್ಲದೊಡೆ ॥
ಹಿಡಿ ಶಾಪವೆಂಬಧಿಕಾರವಾವೆಡೆಯಿಂದ ।
ಪಡೆದರೆಂಬುದನು ಯೋಚಿಪುದು ॥ ॥ ೫೩ ॥

ಗುರುಪೀಠವೆನಲೇನು ಸ್ವಾಮಿಗಳೆನಲಾರು ।
ಸುರಲೋಕದಿಂದಿಳಿದವರೆ ।
ಗುರು ಶಿಷ್ಯರೆಂಬೊಂದು ಸಂಬಂಧವೆಂತಾಯ್ತೋ ।
ಪರಿಯನೆಲ್ಲವ ಯೋಚಿಪ್ಪುದು ॥ ॥ ೫೪ ॥

ಗುರುಪೀಠ ನಮಗಾಗಿ ಬೇಕು ಬೇಕಾದರಾ ।
ಗುರುಪೀಠಕ್ಕಾಗಿ ನಾವಲ್ಲ ॥
ಗುರುಪೀಠಸ್ಥರ ಮಾತಿಂ ಮರುಳರಂತಾಗದೆ ।
ಗುರುಲಾಘವಗಳ ನೋಡುವುದು । ॥ ೫೫ ॥

ನಮಗೆ ಬೇಕಾದರೆ ಬೇಕಲ್ಲದಿರೆ ಬೇಡ ।
ಭ್ರಮಿತರಿಂತಪ್ಪ ಬೋಧಕರು ॥
ಕುಮತಿಗಳೇನೆಂದರೇನು ಮುಂದಿನ ಕಾರ್ಯ ।
ಕ್ರಮವರಿದಾಲೋಚಿಸುವುದು ॥ ॥ ೫೬ ॥

ಸತ್ಯವಿದ್ದಲ್ಲಿ ಸಾವಿರತೋಳ ಬಲುಹಿನಿಂ ।
ದತ್ಯಂತ ಬಲವೆಂಬುದರಿದು ॥
ದೈತ್ಯರಂತವರನಪ್ಪನಿತು ದಂಡಿಸಿ ಕೃತ ।
ಕೃತ್ಯರಪ್ಪುದು ನೀತಿವಿದರು ॥ ॥ ೫೭ ॥

ಸೆರೆಮನೆಯತಿಥಿಯಂತಾದರೊಬ್ಬರು ಜಗ ।
ದ್ಗುರುಗಳು ಹಣಕೆ ಬಾಯ್ದೆರೆದು ॥
ತರುಣಿಯಾಸೆಯನಾಂತು ತೆರಳಿದರೊಬ್ಬರು ।
ಪರಮಹಂಸರು ಪಟ್ಟವಿಳಿದು ॥ ॥ ೫೮ ॥

ಇನ್ನಾವ ತೆರದ ಸನ್ಯಾಸಿಗಳಿಪ್ಪರೊ ।
ಹೊನ್ನು ಹೆಣ್ಣುಗಳ ಭ್ರಾಂತಿಯೊಳು ॥
ಎನ್ನುವರಾರಿಲ್ಲ ತಿಳಿದವರಾರುಂಟು ।
ಸನ್ನುತ ಚರಿತರಂತರವ ॥ ॥ ೫೯ ॥

[illegible]ಸುದೋಸೆ ಬೆಣ್ಣೆ ಪಾಯಸ ತುಪ್ಪ ಪರಮಾನ್ನ ।
ಮೊಸರನ್ನವಿವು ಮಧ್ಯಾಹ್ನದೊಳು ॥
ಕಸಿಮಾವು ಹಲಸು ಕಿತ್ತಳೆ ದ್ರಾಕ್ಷಿ ಖರ್ಜೂರ ।
ಮುಸುಬಿಗಳಿರುಳ ವೇಳೆಯೊಳು ॥ ॥ ೬೦ ॥

ಈ ರೀತಿ ತಿಂದುಂಡು ಮಲಗಿಕೊಂಡರು ನಿದ್ದೆ ।
ಬಾರದೆ ಮೈಮುರಿದೆದ್ದು ॥
ಬೇರೆ ಯೋಚನೆಗಳು ಮನಕೆ ಬಂದರೆ ಮತ್ತಿ ।
ನ್ನಾರ ದೂರುವುದು ನಾವಿಲ್ಲಿ ॥ ॥ ೬೧ ॥

ಇದ್ದುದನಿದ್ದಂತೆ ಕಾಣಲರಿಯದರ್ಘ ।
ಸಿದ್ಧಿಯ ಪಡೆದ ಸೊಕ್ಕಿಗರು ॥
ಹೊದ್ದಿ ಹೋಗಲಿ ಸಂಪುಷ್ಟಾಚಾರ್ಯರೆಡೆಗಂದು ।
ಬೌದ್ಧರೆಂಬವರು ಹೋದಂತೆ ॥ ॥ ೬೨ ॥

ಅನ್ಯಾಯದಿಂದಾದರೇನಿದ್ದಾಸ್ತಿಗೆ ತಕ್ಕ ।
ಮಾನ್ಯತೆ ಬಹಡೆ ಲೋಕದಲಿ ॥
ಸನ್ಯಾಸಿಗಳು ಪೇಳ್ವರೆಂತಂತಿರಿಹುದೆಂಬ ।
ಶೂನ್ಯ ಶೇಮುಷಿಗಳಂತಿರಲಿ ॥ ॥ ೬೩ ॥

ಹೇಳಿಕೆಗೆಲಸ ಹಾಕಿಸಿದನ್ನವೆಂಬೊಂದು ।
ಹೇಳಿಕೆಗನುಸಾರವಾಗಿ ॥
ಊಳಿಗದೊಳೆ ಹೊಚ್ಚ ಹೊಸ ಹೆಸರೆಮಗೆಂದು ।
ಹೇಳುವ ಬಿರುದರಂತಿರಲಿ ॥ ॥ ೬೪ ॥

ಹುಚ್ಚೆದ್ದು ಕುಣಿದೆಮ್ಮ ಹಿರಿಯರಿಗೊದಗದ ।
ಹಚ್ಚಡವೆಮಗಾದುದೆಂದು ॥
ಹೆಚ್ಚಿ ಹೆಮ್ಮೆಯೊಳು ತಮ್ಮವರನೇಳಿಪ ಹೊಟ್ಟೆ ।
ಗಿಚ್ಚಿನ ಹೊದೆಗರಂತಿರಲಿ ॥ ॥ ೬೫ ॥

ಆರೆಮ್ಮ ಹಿರಿಯರಾಮರೆಂಬ ಪರಿಯು ವಿ।
ಚಾರವ ಮರೆದಾರಾಧ್ಯರೊಳು ॥
ಹೋರುವರೆನೆ ರತ್ನ ಹಾರವ ಪುಡಿಗೆಯ್ದಾ।
ದಾರವಾನುವರಂತಿರಿರಲಿ ॥ ॥ ೧೬ ॥

ಮಲೆಯುತ್ತಿನಂತೆ ಮೈಸಿಮಿರಿಹೂಂಕರಿಸಿಮಾ।
ರ್ಮಲೆದುದಿಟ್ಟಿಸುವ ಪಾಕ್ಷಿಕರ ॥
ಬಲುಮೆಗೆ ಬಳಸಂದು ಬರಿದೆದುರ್ನೀತಿಗೆ।
ತಲೆವಾಗಿ ನಡೆವರಂತಿರಲಿ। ॥ ೧೭ ॥

ಬರೆದಿರಿಸಿದ ಭವ್ಯ ಶಾಸನದಂತೆ ಸಂ।
ಸ್ಕರಣವಿಲ್ಲದ ಧರ್ಮಾಂಧಕರ।
ಕುರಿತೀನನೆಂದಿಹರಪ್ಪೊಡಂತೆಸಗುವ।
ಪರಿಯು ಪ್ರತ್ಯಕ್ಷ ತೋರಿಪುದು। ॥ ೧೮ ॥

ಆರೆಮಾಪೆಂದೊಡೆ ದೂರವಿದ್ದವರಿಂದ।
ಬೇರೆಯಿದ್ದಪುದು ಸಂತಸದಿ ॥
ಮಾರಿ ಮರ್ಯಾದೆಯು ಬದುಕಿ ಬಂಡಿಯನುಯ್ದು।
ಪೋರಿಗಳಂತಾಗದಿಹುದು ॥ ॥ ೧೯ ॥

ಭೂಯೆಂದರೊಡೆಯನಾಗಳೆ ಪಾಯ್ದು ಪಿಡದಾಂಕೆ।
ಸಾಯೆ ಕಚ್ಚುವ ಗಾಸಿಗೊಳಿಪ ॥
ಬಾಯೆಂದರೈತಂದು ಬಾಲವಾಡಿಪ ಬೇಟೆ।
ಜಾಯಿಲದಂತಾಗದಿಹುದು ॥ ॥ ೨೦ ॥

ಅಷ್ಟರಾಗಂಗಳಾಲಾಪಂಗಳಿಂದಳ।
ವಟ್ಟ ಸಮಾಜ ಸಂಭ್ರಮಕೆ ॥
ಹೃಷ್ಟ ಚಿತ್ತದೊಳು ಸಮಾಜ ಸಂಗೀತಮಂ।
ದಿಟ್ಟೆ ನಾನಿದಕ್ಕೆ ಸಲ್ವೆಸರ ॥ ॥ ೨೦ ॥

ಬರೆದವನಾರೆಂದುದೇನೆಂದು ನೋಡದೆ ।
ಬರಿದೆ ಕಂಡವರೊಳು ತಿಳಿವ ॥
ಪರಿಣತರಿಗೆ ಪೇಳ್ವೆ ವೆಂಕಟರಮಣ ನಾಂ।
ಬರೆದಾತನೀತಾ ಸದ್ಭಕ್ತಾ । ॥ ೭೨ ॥

ಕೆಲವನಾಚಾರ್ಯರ ಶಾಸನದಿಂದಾಯ್ದು ।
ಕೆಲವನಲ್ಲಲ್ಲಿ ಕಂಡರಿದು ।
ಕೆಲವನು ಕೇಳ್ದಿಂತು ಬರೆದೆನಾಂ ಶ್ರೀ ಲಕ್ಷ್ಮೀ ।
ನಿಲಯ ಶ್ರೀ ಕೃಷ್ಣನೊಲ್ಮೆಯಲಿ ॥ ॥ ೭೩ ॥

॥ ಸಂಪೂರ್ಣ ॥

ಮಹಾವೀರ ಪ್ರಿಂಟಿಗ್ಸ್, ಕಾರ್‌ಸ್ಟ್ರೀಟ್, ಮಂಗಳೂರು-1.

ಪರಾಮರ್ಶೆಗಾಗಿ

ಕಾವ್ಯಕರ್ತ್ರರ ಇತರ ಕೃತಿಗಳು

1.	ಗೀತಾ ಸಾರ (ಭಾಮಿನಿ ಷಟ್ಪದಿಯಲ್ಲಿ)	1 75
2.	ವಾಜಿಗ್ರಹಣ (ಯಕ್ಷಗಾನ)	0 35
3.	ಭೀಮ ವಿಜಯ (ಯಕ್ಷಗಾನ) ...	1 00
4.	ಭಾರತ ರಾಜ್ಯಭಾರಂ (ಕಂದ ಪದ್ಯ) ...	0 25
5.	ಸೂಕ್ತಿವಾದ (ಹಾಡುಗಬ್ಬ)	0 50
6.	ಹೊಟ್ಟೆಯೂ ಅವಯವಗಳೂ (ಚಂಪು ಕಾವ್ಯ)	....
7.	ಕರ್ಣಾಟಕ ಪರಿಸ್ಥಿತಿ ಮತ್ತು ಇತರ ಕೃತಿಗಳು	1 00

ಮಹಾವೀರ ಪ್ರಿಂಟರ್ಸ್, ಕಾರ್‌ಸ್ಟ್ರೀಟ್, ಮಂಗಳೂರು-1.